ಅಸು ನೀಗಿದ ಮುಗ್ಧ ಮಕ್ಕಳ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ ಈ ಭರಿಸ ಲಾಗದ ಶೋಕದಿಂದ ತತ್ತರಿಸಿರುವ ಕುಟುಂಬ ವರ್ಗಗಳವರಿಗೆ ಈ ದುಃಖವನ್ನು ಭರಿ ಸುವ ಶಕ್ತಿಯನ್ನು ಭಗವಂತ ಕೊಡಲೆಂದು ಪ್ರಾರ್ಥಿಸುತ್ತೇನೆ.

ಈಗ ಈ ಎಲ್ಲಾ ಮಹನೀಯರ ಗೌರವಾರ್ಥವಾಗಿ ಮಾನ್ಯ ಸದಸ್ಯರುಗಳೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನ ಆಚರಿಸಬೇಕೆಂದು ಕೋರುತ್ತೇನೆ.

(ಸದನವು ಎದ್ದು ನಿಂತು ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನು ಆಚರಿಸಿತು.)

ಈ ಸಂತಾಪ ಸೂಚನಾ ನಿರ್ಣಯವನ್ನು ಮೃತರ ಕುಟುಂಬವರ್ಗದವರಿಗೆ ಕಳುಹಿಸಿ ಕೊಡಲಾಗುವುದು.

ಈಗ ಸಭೆಯು ಮುಂದೂಡಲ್ಪಟ್ಟು ಮತ್ತೆ ಮಧ್ಯಾಹ್ನ 3-30 ಕ್ಕೆ ಸಮಾವೇಶ ಗೊಳ್ಳುವುದು.

(11 ಗಂಟೆ 15 ನಿಮಿಷಕ್ಕೆ ಸಭೆಯನ್ನು ಮುಂದೂಡಿ ಮತ್ತೆ ಮಧ್ಯಾಹ್ನ 3-30 ಕ್ಕೆ ಸಮಾವೇಶಗೊಳ್ಳಲು ನಿರ್ಧರಿಸಲಾಯಿತು.)

(ಸದನ ಮತ್ತೆ ಸಂಜೆ 5.20 ಗಂಟೆಗೆ ಸಮಾವೇಶಗೊಂಡಿತು, ಸಭಾಧ್ಯಕ್ಷ ರಾದ ಶ್ರೀ ರಮೇಶ್‌ಕುಮಾರ್‌ರವರು ಪೀಠವನ್ನಲಂಕರಿಸಿದರು)

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ನಾನು ಒಂದು ನಿರ್ಣಯ ವನ್ನು ತಮಗೆ ಕಳುಹಿಸಿಕೊಟ್ಟಿದ್ದು, ಅದನ್ನು ಮಂಡಿಸುವುದಕ್ಕೆ ಅವಕಾಶ ಮಾಡಿಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಕಾರ್ಯದರ್ಶಿಯವರ ವರದಿ

ಕಾರ್ಯದರ್ಶಿಯವರು :- ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರಿಂದ ಒಪ್ಪಿಗೆ ಪಡೆದಿ ರತಕ್ಕ ವಿಧೇಯಕಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ರಾಜ್ಯಪಾಲರಿಂದ ಅಥವಾ ರಾಷ್ಟ್ರಪತಿಯವರಿಂದ ಒಪ್ಪಿಗೆಯನ್ನು ಪಡೆದಿರತಕ್ಕ ವಿಧೇಯಕಗಳ ಪಟ್ಟಿ :-

ಕ್ರಮ ಸಂಖ್ಯೆ	ವಿಧೇಯಕದ ಹೆಸರು	ಒಪ್ಪಿಗೆಯನ್ನು ಪಡೆದ ದಿನಾಂಕ	ಒಪ್ಪಿಗೆಯನ್ನು ನೀಡಿದವರು
೧.	ಕರ್ನಾಟಕ ವಿಧಾನ ಮಂಡಲರವರ ವೇತನಗಳ ನಿವೃತ್ತಿ ವೇತನಗಳ ಮತ್ತು ಭತ್ಯೆಗಳ (ತಿದ್ದುಪಡಿ) ವಿಧೇಯಕ ೧೯೯೫	೩೦-೪-೧೯೯೫	ರಾಜ್ಯಪಾಲರು

ಕ್ರಮ ಸಂಖ್ಯೆ	ವಿಧೇಯಕದ ಹೆಸರು	ಒಪ್ಪಿಗೆಯನ್ನು ಪಡೆದ ದಿನಾಂಕ	ಒಪ್ಪಿಗೆಯನ್ನು ನೀಡಿದವರು
೨.	ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ (ತಿದ್ದುಪಡಿ) ವಿಧೇಯಕ ೧೯೯೫	೧೦-೫-೧೯೯೫	ರಾಜ್ಯಪಾಲರು
೩.	ಕರ್ನಾಟಕ ಮಹಿಳಾ ಆಯೋಗ ವಿಧೇಯಕ, ೧೯೯೫	೨೪-೫-೧೯೯೫	”
೪.	ಕರ್ನಾಟಕ ಪೌರಸಭೆಗಳ (ತಿದ್ದುಪಡಿ) ವಿಧೇಯಕ ೧೯೯೫	೧೮-೯-೧೯೯೫	”
೫.	ಕರ್ನಾಟಕ ಸ್ಥಳೀಯ ಪ್ರಾಧಿಕಾರಿಗಳ (ಪಕ್ಷಾಂತರ ನಿಷೇಧ) (ಎರಡನೇ ತಿದ್ದುಪಡಿ) ವಿಧೇಯಕ, ೧೯೯೫	೧೮-೯-೧೯೯೫	”
೬.	ಕರ್ನಾಟಕ ನೀರಾವರಿ (ಪುರೋಭಿವೃದ್ಧಿ ವಂತಿಗೆ ಮತ್ತು ನೀರಿನ ದರ ವಿಧಿಸುವ (ಎರಡನೇ ತಿದ್ದುಪಡಿ) ವಿಧೇಯಕ ೧೯೯೫	೨೫-೯-೧೯೯೫	”
೭.	ಕರ್ನಾಟಕ ಪೌರಸಭೆಗಳ (ಎರಡನೇ ತಿದ್ದುಪಡಿ) ವಿಧೇಯಕ, ೧೯೯೫	೨೬೯೧೯೯೫	”
೮.	ಕರ್ನಾಟಕ ಧನ ವಿನಿಯೋಗ (ನಂ. ೨)	೨೬-೯-೧೯೯೫	”
೯.	ಕರ್ನಾಟಕ ಧನ ವಿನಿಯೋಗ (ನಂ. ೩) ವಿಧೇಯಕ	೨೬-೯-೧೯೯೫	”
೧೦.	ಕರ್ನಾಟಕ ನಗರ ಪ್ರದೇಶಗಳಲ್ಲಿರುವ ಅನಧಿಕೃತ ನಿರ್ಮಾಣಗಳನ್ನು ಸಕ್ರಮಗೊಳಿಸುವ (ತಿದ್ದುಪಡಿ) ವಿಧೇಯಕ, ೧೯೯೫	೦೫-೧೦-೧೯೯೫	”
೧೧.	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, ೧೯೯೫	೦೫-೧೦-೧೯೯೫	”
೧೨.	ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ವಿಧೇಯಕ, ೧೯೯೫	೧೨-೧೦-೧೯೯೫	”
೧೩.	ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ವಿಧೇಯಕ, ೧೯೯೫	೨೦-೧೦-೧೯೯೫	”

ಅಧ್ಯಕ್ಷರು : ಸಭೆಯ ಮುಂದೆ ಮಂಡಿಸಲಾಯಿತು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವರು) (ಶ್ರೀ ಆರ್. ಎಲ್. ಜಾಲಪ್ಪ (ಕಂದಾಯ ಮಂತ್ರಿ) ನವರ ಪರವಾಗಿ :- ಮಾನ್ಯ ಅಧ್ಯಕ್ಷರೇ, ಭಾರತ ಸಂವಿಧಾನದ 213 (2) (ಎ) ಕಲಮಿನ ಮೇರೆಗೆ 1995 ನೇ ಇಸವಿಯ ಕರ್ನಾಟಕ ಭೂ ಸುಧಾರಣೆ (ತಿದ್ದುಪಡಿ) ಸಂಖ್ಯೆ : 8 ರ ಅಧ್ಯಾದೇಶಕ್ಕೆ ಸಂಬಂಧಿಸಿದಂತೆ ದಿನಾಂಕ 20-10-95 ರಂದು ಹೊರಡಿಸಲಾದ ಎಲ್‌ಡಬ್ಯೂ ಎಲ್50 ಎಲ್‌ಬಿಎನ್ 95 ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದಿಡುತ್ತೇನೆ.